ಅಂದರೆ, ರೆವಿನ್ಯೂ ಆಫಿಸರ್ (ಅಮಲ್‌ದಾರ್) ಯಿಂದ ವಸೂಲ್ ಮಾಡಲ್ಪಟ್ಟ ಮೊಬಲಗನ್ನು ಕುರಿತು ಕೂಡ್ಲೆ ಆತನು ಫಾರೆಸ್ಟ್ ಆಫಿಸರಿಗೆ ರಿಪೋರ್ಟು ಮಾಡತಕ್ಕದ್ದು. ಪರಂತು ಫಾರೆಸ್ಟ್ ಆಫಿಸರು ಖಜಾನೇಗೆ ಅಡ್ವೈಸನ್ನು ಕಳುಹಿಸಬೇಕಾದಲ್ಲವು.

3. ಟ್ರೆಜರೀ ಲೆಕ್ಕದ ನಮೂನೇಯಲ್ಲಿ ಡಿಸ್ಟ್ರಿಕ್ಟ್ ಟ್ರೆಜರೀ ಆಫಿಸರು "ಫಾರೆಸ್ಟ್" ಯೆಂಬ ಮೇಜರ್ ಹೆಡ್ ಕೆಳಗೆ, ಸ್ಟೇಟ್ ಫಾರೆಸ್ಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಯಿವುಗಳ ಹುಟ್ಟುವಳಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಧಿಸಲ್ಪಟ್ಟ ತಪಶೀಲ್‌ಗಳೊಡನೆ ತೋರಿಸುವ ಬಗ್ಗೆ ಸೇರಿದಹಾಗೆ ಯಿರುವ ಯರಡು ಮದ್ದಗಳನ್ನು ಕಲ್ಪಿಸಬೇಕೆಂದು ಕೋರುತ್ತೆ.

H. HUDSON,
Dy. Accti. General in Mysore.

ಪಬ್ಲಿಕ್ ವರ್ಕ್ಸ್ ಇಲಾಖೆ.

ತಾರೀಖು 3ನೇ ಅಕ್ಟೋಬರ್ 1876.

ಇದರಡಿಬರುವ ವರ್ಗಾ ವರ್ಗಿಯು ಮಂಜೂರ್ಮಾಡಲ್ಪಟ್ಟಿರುತ್ತೆ.

3ನೇ ಗ್ರೇಡ್ ಓವರ್‌ಸಿಯರ್ ಕೃಷ್ಣಯ್ಯನವರು ಟ್ಯಾಂಕ್ ಡಿವೀಜ್ 2ನೇ ನಂಬರಿನಿಂದ 1ನೇ ನಂಬರ್ ಟ್ಯಾಂಕ್ ಡಿವೀಜನ್ನಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

2. ಈ ವರ್ಗಾ ವರ್ಗಿಯು ಸರಕಾರ ಪ್ರಯೋಜನಕ್ಕಾಗಿ ಮಾಡಲ್ಪಟ್ಟಿರುತ್ತೆ.

W. CHRYSTIE, *Major*, R. E.,
Supg. Engr. of Irrigation.

ಫಾರೆಸ್ಟ್ ಇಲಾಖೆ.

ಇಸ್ತಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ವುರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವೆ.

ಶಿವಮೊಗ್ಗಾ,	16ನೇ	ಅಕ್ಟೋಬರ್	1876.	ಹೆಚ್ಚುಕಡಮೆ 200 ಟ್ಯಕ್ಕಗಳ ವಜನಿ.
ಸಾಗರ್,	25ನೇ	,,	,,	
ಹುಣಸೂರು,	4ನೇ	ನವಂಬರ್	1876	ಹೆಚ್ಚುಕಡಮೆ 560 ಟ್ಯಕ್ಕಗಳ ವಜನಿ.
ಶ್ರೀರಂಗಪಟ್ಟಣ,	8ನೇ	,,	,,	
ಬೆಂಗಳೂರು,	1ನೇ	ಡಿಶಂಬರ್	,,	ಹೆಚ್ಚುಕಡಮೆ 100 ಟ್ಯಕ್ಕಗಳು.
ಫ್ರೆಜರ್‌ಪೇಟೆ	18ನೇ	,,	,,	80 ,,

ಹರಾಜ್‌ನಿಬಂಧನೆ—ಹರಾಜ್‌ವೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀವೊಬಲಗನ್ನು ಹರಾಜ್‌ತಾರೀಖುವೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮುಕ್ತಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳೆಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯ ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿವಾಜಿಟ್ ವೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿವಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತ್ತೆದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾವೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಕೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಕ್ಯೂಬಿಕ್ ಫೂಟ್, ಪೌಂಡ್, ಹಂಡ್ರೆಡ್ ಕ್ಯೂಬಿಕ್ ಫೂಟ್ ಟ್ಯಕ್ಕಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain*,
Conservator of Forests, Mysore & Coorg.

ನಂದೀದುರ್ಗ ಡಿವೀಜ್ಞ.

ತಾರೀಖು 29ನೇ ಕಪ್ಟಂಬರ್ 1876.

ಶಿಡ್ಲಘಟ್ಟದ ತಾಲ್ಲೂಕು ಹಂಗಾಮೀ ಮರಹವ್ಮತ್ ಮುತ್ಸದ್ದಿ ಗುಂಡಪ್ಪಗೆ ಆತ ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯ್ತು ರಾಮಕೃಷ್ಣಯ್ಯನೆಂಬವನ ಬದಲೀವೇಲೆ 25 ದಿನಗಳ ರಜಾ ಮಂಜೂರಾಗಿರುತ್ತೆ.

J. L. PEARSE,
Commissioner.

ಎಕ್ಸ್‌ಪೆರಿಮೆಂಟಲ್ ಫಾರಂ.

ತಾರೀಖು 18ನೇ ಕಪ್ಟಂಬರ್ 1876.

ಫಾರಂ ಅಂದರೆ ವ್ಯವಸಾಯ ವಿಷಯದ ಅಜಮಾಯಿಷೀ ಜಮೀನಿನ ಸೂಪರಿಂಟೆಂಡೆಂಟರು ಇದರಿಂದ ತಿಳಿಯಪಡಿಸುವದೇನಂದರೆ,—ಯಾವದಿನದಲ್ಲಾಗಲಿ ಬೆಳಿಗ್ಗೆ 7 ಗಂಟೆಗಳವೊದಲು 9 ಗಂಟೆಗಳವರಿಗೆ ಫಾರಂ ಜಾಗಾದಲ್ಲಿ ಬರತಕ್ಕ ಅಮಲ್‌ದಾರರ್, ನೇಟಿವ್ ಪೇಸಾಯಗಾರರು ಮತ್ತು ಪೇಸಾಯದ ವಿಷಯದೊಳಗೆ ಆಕ್ಕರೆವುಳ್ಳ ಜನಗಳು ಇವರುಗಳನ್ನು ಸದರೀ ಜಮೀನಿನಲ್ಲಿ ಬೆಳೆ ಇಡಲ್ಪಟ್ಟ ಹೊಸ ಫಸಲ್‌ಗಳ ಗುಣವನ್ನೂ ಹೊಸ ಸಾಧನಗಳ ಉಪಯೋಗಗಳನ್ನೂ, ವಿಧವಿಧವಾದ ಪೇಸಾಯದ ತರಹೇಗಳನ್ನೂ ಕುರಿತು ವಿವರಿಸುವಬಗ್ಗೆ ನೋಡಲಿಕ್ಕೆ ಅಪೇಕ್ಷೆಯುಳ್ಳವರಾಗಿದ್ದಾರೆ.

F. E. HARMAN,
Supt. of Experimental Farm.

MYSORE DISTRICT.

Notice of an application by Venkatachar for a certificate under Act XXVII of 1860.

ಮೈಸೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸ॥ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 67.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಲಕ್ಷ್ಮಿಪುರಂ ಚಿನ್ನಸ್ವಾಮಯ್ಯಂಗಾರಿಗೆ ಬರಬೇಕಾದ 900 ರೂಪಾಯಿಗಳನ್ನು ವಸೂಲ್ ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟು ಆಗಬೇಕೆಂದು ತಲಕಾಡು ತಾಲ್ಲೂಕು ಸೊಸಲೇ ಹೋಬಳಿ ಶ್ರೀರಂಗರಾಜಪುರದಲ್ಲಿ ಯಿರುವ ಲಕ್ಷ್ಮಿಪುರಂ ವೆಂಕಟಾಚಾರ್ಯಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ್ ತಿಂಗಳು 10ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಆ ವೆರವರ ತಕರಾರನ್ನ ಸ್ಥಿರಪಡಿಸಿಕ್ಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮೊಹೇ ಕಪ್ಟಂಬರು ಸ॥ 1876ನೇ ಇಸವಿ, ಮೊಕ್ಕಾಂ ಮೈಸೂರು.

E. C. SHANMUGAVELU PILLE,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಚನ್ನಗಿರೀಯಿಂದ ಶಿವಮೊಗ್ಗಾ ಜೈಯಿಲ್‌ಗೆ ಪೋಲಿಸಿನವರ ಪಹರೇವೇಲೆ ತೆಗದುಕ್ಕೊಂಡು ಹೋಗುತ್ತಿರುವ ಸಮಯದಲ್ಲಿ ಪರಾರಿಯಾದ ಖೈದಿ ಹೆಂಗಸಿನ ಚಹರೆ ಪಟ್ಟಿ.

ಹೆಸರು ರಂಗಿ—ಜಾತಿ ಬಡಿಗಿಯವಳು—ವೇಶ್ಯಾವೃತ್ತಿಯಲ್ಲಿ ಬೆಳಿಸಲ್ಪಟ್ಟವಳು—ವಾಸಸ್ಥಳ ಗೊತ್ತಿಲ್ಲ—ತಪ್ಪಿತ ಮನೇ ಇಲ್ಲೇಬಿದ್ದದ್ದು—ಶಿಕ್ಷೆ ಯರಡು ವರುಷಗಳ ಕಠಿಣಖೈದು—ವಯಸ್ಸು ಸುಮಾರು 25 ವರುಷ—ಎತ್ತರ ನಾಲ್ಕು ಅಡಿ ನಾಲ್ಕು ಅಂಗುಲ—ಯಾರಿಂದ ಶಿಕ್ಷೆ ವಿಧಿಸಲ್ಪಟ್ಟದ್ದು ಸಾಗರ ಸಬ್ ಡಿ॥ 1ನೇ ಕ್ಲಾಸ್ ಮೇಜಿಸ್ಟ್ರೇಟರಿಂದ.

ಮುಖ್ಯವಾದ ಗುರುತುಗಳು, ಕೆಂಪುಬಣ್ಣ ದಪ್ಪವಾದ ಕೀರ.

MAHOMED ALI,
For Offg. Dy. Commr.